ಜೆ. ಎಸ್. ಎಸ್

# ಶ್ರೀ ಮಂಜುನಾಥೇಶ್ವರ ಕೇಂದ್ರಿಯ ಶಾಲೆ,

ಶಿವಳ್ಳಿ ರಸ್ತೆ, ಉಣಕಲ್, ಹುಬ್ಬಳ್ಳಿ.

ಅರ್ಧ ವಾರ್ಷಿಕ ಪರೀಕ್ಷೆ- (೨೦೨೦-೨೧)

ತರಗತಿ:೭ ವಿಷಯ:ಕನ್ನಡ ಗರಿಷ್ಠ ಅಂಕ:೮೦

ಅ ಭಾಗ ( ಬಹು ಆಯ್ಕೆ ಪ್ರಶ್ನೆಗಳು) -೪೦ ಅಂಕಗಳು

ಆ ಭಾಗ ( ವಿವರಣಾತ್ಮಕ ಪ್ರಶ್ನೆಗಳು) -೪೦ ಅಂಕಗಳು

## ಭಾಗ – ಅ

ವಿಭಾಗ -A (ವಾಚನ ಮತ್ತು ಗ್ರಹಿಕಾ ಕೌಶಲ)

ಪ್ರಶ್ನೆ೧.ಅ) ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 5x1=5

ಡಾ.'ಸರ್ವಪಲ್ಲಿ ರಾಧಾಕೃಷ್ಣನ್' ಜನಿಸಿದ್ದು ದಕ್ಷಿಣ ಭಾರತದ ತಮಿಳುನಾಡಿನ 'ತಿರುತ್ತಣಿ' ಎಂಬಲ್ಲಿ ಸೆಪ್ಟೆಂಬರ್ ೫, ೧೮೮೮ ರಲ್ಲಿ ಜನಿಸಿದರು. ಇವರ ಮಾತೃ ಭಾಷೆ ತೆಲಗು. ಸರ್ವಪಲ್ಲಿ ಎನ್ನುವುದು ಮನೆತನದ ಹೆಸರಾದರೆ, 'ರಾಧಾಕೃಷ್ಣನ್' ಎನ್ನುವುದು ಅವರ ತಂದೆ-ತಾಯಿ ಇಟ್ಟ ಮುದ್ದಿನ ಹೆಸರು. ತಂದೆ ಸರ್ವಪಲ್ಲಿ ವೀರಸ್ವಾಮಿ ತಾಯಿ ಸೀತಮ್ಮ. ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಲ್ಲಿ ಮುಗಿಸಿದರು. ಬಿ.ಎ. ನಂತರ ತತ್ವ ಶಾಸ್ತ್ರದಲ್ಲಿ ಎಂ.ಎ ಪದವಿ ಪಡೆದರು.

ಪ್ರಶ್ನೆಗಳು:

೧) ಡಾ.'ಸರ್ವಪಲ್ಲಿ ರಾಧಾಕೃಷ್ಣನ್' ಜನಿಸಿದ್ದು ____________ ಎಂಬ ಊರಿನಲ್ಲಿ.

ಅ) ತಿರುತ್ತಣಿ ಬ)ಭಾರತ ಕ)ತಮಿಳು ನಾಡು ಡ) ದಕ್ಷಿಣ ಭಾರತ

೨) ಡಾ.'ಸರ್ವಪಲ್ಲಿ ರಾಧಾಕೃಷ್ಣನ್' ಜನಿಸಿ ವರ್ಷ _______________

ಅ)೧೮೮೮ ಬ) ೧೮೮೯ ಕ) ೧೮೮೭ ಡ) ೧೮೮೬

೩) ಡಾ.'ಸರ್ವಪಲ್ಲಿ ರಾಧಾಕೃಷ್ಣನ್'ರವರ ಮಾತೃ ಭಾಷೆ __________

ಅ) ಕನ್ನಡ ಬ) ತಮಿಳು ಕ) ತೆಲಗು ಡ) ಮಲೆಯಾಳಂ

೪) ಡಾ.'ಸರ್ವಪಲ್ಲಿ ರಾಧಾಕೃಷ್ಣನ್' ರವರ ತಂದೆ ಮತ್ತು ತಾಯಿಯ ಹೆಸರು __________

ಅ)ವೀರಣ್ಣ,ಸೀತಾದೇವಿ ಬ)ವೀರಸ್ವಾಮಿ,ಸೀತಮ್ಮ ಕ)ವೀರೇಶ,ಕಮಲಮ್ಮ ಡ)ವೀರಸ್ವಾಮಿ,ವಿದ್ಯಾವತಿ

೫)______________ದಲ್ಲಿ ಎಂ,ಎ ಪದವಿ ಪಡೆದರು

ಅ)ತತ್ವ ಶಾಸ್ತ್ರ ಬ)ವೈದ್ಯಕೀಯ ಕ)ಆಂಗ್ಲ ಭಾಷೆ ಡ)ಕನ್ನಡ ಭಾಷೆ

ಆ) ಈ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 5x1=5

ಹಣ್ಣು ಕಾಯಿ ಮದುವೆ

ಹಾಗಲಕಾಯಿಗು ಮಾವಿನ ಹಣ್ಣಿಗು ಮದುವೆ ನಡೆದಿತ್ತು
ಛತ್ರದ ತುಂಬಾ ತರಕಾರಿ ಹಣ್ಣಿನ ಗುಂಪೇ ತುಂಬಿತ್ತು
ಬಾಳೆಗೊನೆ ಬಾಗಿ ಸ್ವಾಗತ ಮಾಡುತಿತ್ತು
ಡೊಳ್ಳು ಹೊಟ್ಟೆಯ ಕುಂಬಳಕಾಯಿ ಡೋಲು ಬಾರಿಸುತಿತ್ತು
ಸೋರೆಕಾಯಿ ಸೊಗಸಾಗಿ ವಾಲಗ ಊದುತ್ತಿತ್ತು
ತೆಂಗಿನಕಾಯಿ ಹೋಳುಗಳೆರಡು ತಾಳ ಹಾಕುತ್ತಿತ್ತು

ಪ್ರಶ್ನೆಗಳು:

೧) ಹಾಗಲಕಾಯಿಗು ಮಾವಿನ ಹಣ್ಣಿಗು ________ನಡೆದಿತ್ತು

ಅ) ಊಟ ಬ) ಆಟ ಕ) ಮದುವೆ ಡ) ಜಗಳ

೨) ________ ತುಂಬಾ ತರಕಾರಿ ಹಣ್ಣಿನ ಗುಂಪೇ ತುಂಬಿತ್ತು

ಅ) ಛತ್ರದ ಬ) ಮನೆಯ ಕ) ಮೈದಾನ ಡ) ಶಾಲೆಯ

೩) ಬಾಳೆಗೊನೆ ಬಾಗಿ ________ ಮಾಡುತಿತ್ತು.

ಅ) ಧನ್ಯವಾದ ಬ) ಅಭಿನಂದನೆ ಕ) ಸ್ವಾಗತ ಡ) ವಂದನೆ

೪) ಡೊಳ್ಳು ಹೊಟ್ಟೆಯ ___________ ಡೋಲು ಬಾರಿಸುತಿತ್ತು

ಅ) ಮಾವಿನ ಕಾಯಿ ಬ) ಕುಂಬಳಕಾಯಿ ಕ) ಪಡವಲ ಕಾಯಿ ಡ) ಸೋರೆಕಾಯಿ

೫) ಸೋರೆಕಾಯಿ ಸೊಗಸಾಗಿ __________ ಊದುತ್ತಿತ್ತು

ಅ) ತಬೂರಿ ಬ) ವಾಲಗ ಕ) ಡೊಳ್ಳು ಡ) ವೀಣೆ

ಇ. ಬಿಟ್ಟ ಸ್ಥಳಗಳಿಗೆ ಸೂಕ್ತ ಉತ್ತರವನ್ನು ಆಯ್ದು ಬರೆಯಿರಿ. 4x1=4

೧)ಅಂಧಕಾರದ ದೆಸೆಯಿಂದ ___________ಪ್ರಭೆಯಾಯಿತು.

ಅ)ಸೂರ್ಯ ಬ)ಚಂದ್ರ ಕ)ನಕ್ಷತ್ರ ಡ)ಬ್ರಹ್ಮಾಂಡ

೨)ಪ್ರಾಣಿಗಳಲ್ಲೇ ದೊಡ್ಡ ಪ್ರಾಣಿ _______

ಅ)ಆನೆ ಬ)ಜಿರಾಫೆ ಕ)ಸಿಂಹ ಡ)ತಿಮಿಂಗಲು

೩)ನುಡಿಯಲುಬಾರದು ____ನುಡಿಗಳ.

ಅ)ಕೆಟ್ಟ ಬ)ಒಳ್ಳೆಯ ಕ)ಪ್ರೀತಿಯ ಡ)ಅಹಂಕಾರದ

೪)ಅರ್ಜುನನ ಸಾರಥಿ __________

ಅ)ಶ್ರೀಕೃಷ್ಣ ಬ)ಶಲ್ಯ ಕ)ನಕುಲ ಡ)ಧರ್ಮರಾಯ

ವಿಭಾಗ –B (ಅನ್ವಯಿಕ ವ್ಯಾಕರಣ)

ಪ್ರಶ್ನೆ೨) ಕೊಟ್ಟಿರುವ ಪ್ರಶ್ನೆಗಳಿಗೆ ಸೂಕ್ತ ಉತ್ತರ ಆಯ್ದು ಬರೆಯಿರಿ. 16X1=16

೧) 'ಅಣ್ಣ' ಎಂಬ ಪದವನ್ನು ಲಿಂಗ ಬದಲಿಸಿದಾಗ ________

ಅ) ಅಕ್ಕ ಬ) ಅಜ್ಜಿ ಕ) ಅಮ್ಮ ಡ) ಚಿಕ್ಕಮ್ಮ

೨) 'ಬಾಲಕಿ' ಎಂಬ ಪದವನ್ನು ವಚನ ಬದಲಿಸಿ ಬರೆದಾಗ _________

ಅ) ಬಾಲಕಿಯರು ಬ) ಬಾಲಕಿಗಳು ಕ) ಬಾಲಕಿಯಂದಿರು ಡ) ಬಾಳಿಕೆಯರು

೩) ___________ಎಂಬ ಪದವು ಅಂಕಿತ ನಾಮಪದವಾಗಿದೆ.

ಅ) ಗಣೇಶ ಬ) ಶಾಲೆ ಕ) ಕುಂಟ ಡ) ನದಿ

೪)___________ಎಂಬ ಪದವು ರೂಢ ನಾಮಪದವಾಗಿದೆ.

ಅ) ಶಿಕ್ಷಕ ಬ) ವಿಜಯ ಕ) ಕಮಲಾ ಡ) ನದಿ

೫) ___________ಎಂಬ ಪದವು ಸರ್ವನಾಮ ಪದವಾಗಿದೆ.

ಅ) ಬಸ್ಸು ಬ) ಗುಲಾಬಿ ಕ) ಅವಳು ಡ) ಅಜ್ಜಿ

೬) 'ಹಸು ಕಪ್ಪಾದರೆ ____________ (ಗಾದೆಯನ್ನು ಪೂರ್ಣಗೊಳಿಸಿ)

ಅ) ಒಳ್ಳೆಯದು ಬ) ಕೆಟ್ಟದ್ದು ಕ) ಹಾಲು ಕಪ್ಪೆ! ಡ) ಹಾಲು ಬೆಳ್ಳಗೆ

೭) 'ಗೂಡನ್ನು' ಎಂಬ ಪದದಲ್ಲಿರುವ ವಿಭಕ್ತಿ ______

ಅ) ಪ್ರಥಮ ಬ) ದ್ವಿತೀಯ ಕ) ತ್ರತೀಯಾ ಡ) ಚತುರ್ಥಿ

೮)___________ಎಂಬ ಪದವು ಅನ್ವರ್ಥಕ ನಾಮಪದವಾಗಿದೆ.

ಅ) ಮರಳು ಬ) ಪರಿಸರ ಕ) ನಯನ ಡ) ವಕೀಲ

೯) 'ಭವ್ಯವಾದ ದೇವಾಲಯ' ಎಂಬ ಪದದಲ್ಲಿ ಗುಣವನ್ನು ಸೂಚಿಸುವ ಪದ _________

ಅ) ಭವ್ಯವಾದ ಬ) ದೇವಾಲಯ ಕ) ಆಲಯ ಡ) ಭವ್ಯಾಲಯ

೧೦) ಗುಂಪಿಗೆ ಸೇರದ ಪದ ___________

ಅ)ಚಿರತೆ ಬ)ಹಸು ಕ)ಸಿಂಹ ಡ)ಹುಲಿ

೧೧)'ಅವನಿಗೆ + ಇಲ್ಲ' ಎಂಬ ಪದಗಳನ್ನು ಕೂಡಿಸಿ ಬರೆದಾಗ___________

ಅ)ಅವನಿಲ್ಲ ಬ)ಅವನಿಗಿಲ್ಲ ಕ)ಅವನಲ್ಲಿ ಡ)ಅವನಲ್ಲೂ

೧೨) ? ಇಲ್ಲಿ ಕೊಟ್ಟಿರುವ ಲೇಖನ ಚಿಹ್ನೆಯ ಹೆಸರು__________

ಅ)ಆವರಣಚಿಹ್ನೆ ಬ)ಪ್ರಶ್ನಾರ್ಥಕಚಿಹ್ನೆ ಕ)ಉದ್ಧರಣಚಿಹ್ನೆ ಡ)ಭಾವಸೂಚಕಚಿಹ್ನೆ

೧೩)'ಬೊಡ್ಡೆ' ಎಂಬ ಪದದ ಸಮಾನಾರ್ಥಕ ಪದ __________

ಅ)ಮರದ ಕಾಂಡ ಬ) ರೆಂಬೆ ಕ) ಮರದ ಎಲೆ ಡ) ಕಾಯಿ

೧೪) ! ಇಲ್ಲಿ ಕೊಟ್ಟಿರುವ ಲೇಖನ ಚಿಹ್ನೆಯ ಹೆಸರು__________

ಅ) ಆವರಣಚಿಹ್ನೆ ಬ) ಪ್ರಶ್ನಾರ್ಥಕಚಿಹ್ನೆ ಕ) ಉದ್ಧರಣಚಿಹ್ನೆ ಡ) ಭಾವಸೂಚಕಚಿಹ್ನೆ

೧೫) 'ತವರು' ಎಂಬ ಪದದ ಸಮಾನಾರ್ಥಕ ಪದ __________

ಅ) ತಾಯಿಯ ಮನೆ ಬ) ಅಜ್ಜನ ಮನೆ ಕ) ಗೆಳತಿಯ ಮನೆ ಡ)ಪಕ್ಕದ ಮನೆ

೧೬) 'ಅವನಂಗಡಿ ' ಎಂಬ ಪದವನ್ನು ಬಿಡಿಸಿ ಬರೆದಾಗ __________

ಅ) ಅವನ +ಅಂಗಡಿ ಬ) ಅವನು +ಅಂಗಡಿ ಕ) ಅವನ + ಗಡಿ ಡ) ಅಂಗಡಿ +ಅವನ

## ವಿಭಾಗ –C (seen passage)

ಪ್ರಶ್ನೆ೩) ಅ. ಕೆಳಗಿನ ಕೊಟ್ಟಿರುವ ಪಾಠದ ಘಟಕವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ. 5 X 1 = 5

ಶಲ್ಯ ಮದ್ರದೇಶದ ರಾಜನಾಗಿದ್ದ. ಆ ದೇಶದ ಪದ್ಧತಿಯಂತೆ ಆತನ ತಂಗಿಗೆ ಮಾದ್ರಿ ಎಂಬ ಹೆಸರು ಬಂದಿತು. ಮಾದ್ರಿಯನ್ನು ಪಾಂಡು ಮದುವೆಯಾದ. ಹೀಗಾಗಿ ಶಲ್ಯ, ನಕುಲ- ಸಹದೇವರಿಗೆ ಸೋದರಮಾವ. ಉಳಿದ ಪಾಂಡವರಿಗೂ ಮಾವ. ಕುರುಕ್ಷೇತ್ರ ಯುದ್ಧ ನಿಶ್ಚಯವಾದ ಮೇಲೆ ಪಾಂಡವರಿಗೆ ಸಹಾಯ ಮಾಡಲೆಂದು ತನ್ನ ಸೇನೆಯನ್ನು ತೆಗೆದುಕೊಂಡು, ಮತ್ಸ್ಯ ದೇಶದ ಉಪಪ್ಲವ್ಯ ಎಂಬ ಪಟ್ಟಣಕ್ಕೆ ಬರುತ್ತಾನೆ.

ಪ್ರಶ್ನೆಗಳು:

೧)__________ಮದ್ರದೇಶದ ರಾಜನಾಗಿದ್ದ.

ಅ)ದುರ್ಯೋಧನ ಬ)ಧರ್ಮರಾಜ ಕ) ಶಲ್ಯ ಡ)ದ್ರುಪದ

೨) ಮದ್ರ ದೇಶದ ಪದ್ಧತಿಯಂತೆ ಆತನ ತಂಗಿಗೆ __________ಎಂಬ ಹೆಸರು ಬಂದಿತು.

ಅ)ಮಂದಾಕಿನಿ ಬ)ಮದರಂಗಿ ಕ)ಮಾಧುರಿ ಡ)ಮಾದ್ರಿ

೩) ಶಲ್ಯ ನಕುಲ-ಸಹದೇವರಿಗೆ __________.

ಅ)ಸೋದರ ಮಾವ ಬ)ಗೆಳೆಯ ಕ)ಅಜ್ಜ ಡ)ದೊಡ್ಡಪ್ಪ

೪) _________ ಯುದ್ಧ ನಿಚ್ಚಯವಾಯಿತು.

ಅ)ಮಗದ ಬ)ಹರಿಯಾಣ ಕ)ಕುರುಕ್ಷೇತ್ರ ಡ)ಮತ್ಸ್ಯ

೫) ಶಲ್ಯ ಮತ್ಸ್ಯ ದೇಶದ _________ಎಂಬ ಪಟ್ಟಣಕ್ಕೆ ಬರುತ್ತಾನೆ.

ಅ)ಉಪಾಯ ಪ್ಲವ್ಯ ಬ)ಉಪ ಪಲವ್ಯ ಕ)ಉಪ ಏಕಲವ್ಯ ಡ) ಉಪಪ್ಲವ್ಯ

(seen poem)

ಆ. ಕೆಳಗೆ ಕೊಟ್ಟಿರುವ ಪದ್ಯವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ. 5x1=5

ಹರ ತನ್ನ ಭಕ್ತರ ತಿರಿವಂತೆ ಮಾಡುವನು
ಒರೆದು ನೋಡುವ ಮಿಸುನಿಯದ ಚಿನ್ನದಂತೆ
ಅರೆದು ನೋಡುವ ಚಂದನದಂತೆ
ಅರಿದು ನೋಡುವ ಕಬ್ಬಿಣ ಕೋಲಿನಂತೆ
ಬೆದರದೆ ಬೆಚ್ಚದೆ ಇರ್ದಡೆ
ಕರವಿಡಿದೆತ್ತಿಕೊಂಬ ನಮ್ಮ ರಾಮನಾಥ -ಜೇಡರ ದಾಸಿಮಯ್ಯ

ಪ್ರಶ್ನೆಗಳು:

೧) ಹರ ತನ್ನ ಭಕ್ತರ _________ಮಾಡುವನು

ಅ)ಕುಣಿವಂತೆ ಬ)ನಡೆವಂತೆ ಕ)ಜಿಗಿವಂತೆ ಡ) ತಿರಿವಂತೆ

೨)ಮಿಸುನಿ ಎಂದರೆ___________

ಅ)ತಾಮ್ರ ಬ)ಕಂಚು ಕ)ಬೆಳ್ಳಿ ಡ)ಬಂಗಾರ

೩)ಅರೆದು ನೋಡುವ ____________

ಅ)ಚಂದನದಂತೆ ಬ)ಕಲ್ಲಿನಂತೆ ಕ)ಬೆಳ್ಳುಳ್ಳಿಯಂತೆ ಡ)ಅರಿಶಿಣದಂತ

೪)_________ನೋಡುವ ಕಬ್ಬಿಣ ಕೋಲಿನಂತೆ

ಅ)ಹುರಿದು ಬ)ಕರೆದು ಕ)ಅರಿದು ಡ)ಬರೆದು

೫) ಜೇಡರ ದಾಸಿಮಯ್ಯನವರ ಅಂಕಿತ ನಾಮ ________

ಅ)ಕಾಶಿನಾಥ ಬ)ಬದರಿನಾಥ ಕ)ಭೀಮನಾಥ ಡ)ರಾಮನಾಥ

## ಭಾಗ–B

ಪ್ರಶ್ನೆ೪) ಅ. ೨-೩ ವಾಕ್ಯಗಳಲ್ಲಿ ಉತ್ತರಿಸಿ. (any 4) 4X2=8

೧) ತವರು ಮನೆಗೆ ಹೋಗಲು ಗುರುತುಗಳೇನು?

೨) ಬೆಳೆದು ನಿಂತ ಗಿಡ-ಮರ ಹೇಗಿವೆ?

೩) ಗಿಡ- ಮರಗಳು ಯಾವುದನ್ನು ಮೀರಿ ಬೆಳೆದಿವೆ?

೪)'ಕೈ ಎಲ್ಲಿಗ್ ಹೋತು' ಈ ಮಾತನ್ನು ಯಾರು ಯಾರಿಗೆ ಹೇಳಿದರು? ಪಾಠದ ಹೆಸರನ್ನು ಬರೆಯಿರಿ.

೫)ನಾನು ಚುಕ್ಕಿಯನ್ನು ಬಿಟ್ಟು ಇರಲಾರೆ ಈ ಮಾತನ್ನು ಯಾರು ಯಾರಿಗೆ ಹೇಳಿದರು? ಪಾಠದ ಹೆಸರನ್ನು ಬರೆಯಿರಿ.

ಆ. ೪–೫ ವಾಕ್ಯಗಳಲ್ಲಿ ಉತ್ತರಿಸಿ. (ಯಾವುದಾದರೂ 4) 4X3=12

೧) 'ಗಿಡ ಮರ' ಪದ್ಯದ ಭಾವಾರ್ಥವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೨) "ಭಾಗ್ಯದ ಬಳೆಗಾರ" ಪದ್ಯದ ಭಾವಾರ್ಥವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೩)ಯುವಕ ಹಳ್ಳದ ಬಳಿಗೆ ಬಂದು ಏನು ಮಾಡಿದನು?

೪)ಸೀನಸೆಟ್ಟರ ವೇಷ ಹೇಗಿತ್ತು? ಹಾಲಪ್ಪನಿಗೆ ಹಾವು ಕಚ್ಚಿದಾಗ ಅವರು ಏನು ಮಾಡಿದರು?

೫) ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು ಗದ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಇ. ೮–೧೦ ವಾಕ್ಯಗಳಲ್ಲಿ ಉತ್ತರಿಸಿ. (any 1) 4X1=4

೧) 'ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು' ಎಂಬ ಪಾಠದಲ್ಲಿ ಬರುವ ಯುವಕ ಮತ್ತು ಯುವತಿಯ ನಡುವೆ ನಡೆದ ಸಂಭಾಷನೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೨) 'ಗಿಡ ಮರ' ಎಂಬ ಪದ್ಯದ ಭಾವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

### ಪೂರಕ ಪಾಠಗಳು

ಪ್ರಶ್ನೆ೬) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (any 4) 4X1=4

೧) ಬಸವಣ್ಣನವರ ತಂದೆ, ತಾಯಿಯ ಹೆಸರೇನು?

೨) ನಮ್ಮ ದೈವ ಯಾರು?

೩) ಬಸವಣ್ಣನವರು ಬಾಗೇವಾಡಿಯನ್ನು ಬಿಟ್ಟು ಎಲ್ಲಿಗೆ ಹೋದರು?

೪)ಬಣ್ಣದ ಬುಗುರಿ ಯಾವುದು?

೫) 'ಈ ಭೂಮಿ ಬಣ್ಣದ ಬುಗುರಿ' ಎಂಬ ಪದ್ಯದ ಕವಿಯ ಹೆಸರೇನು?

ಪ್ರಶ್ನೆ೭) ಬೇಕಾದ ೩ಕ್ಕೆ ಉತ್ತರಿಸಿ. ( any 3) 4X3 = 12

೧)'ಕಾಡು ನಾಶದಿಂದಾಗುವ ದುಷ್ಪರಿಣಾಮದ' ಕುರಿತು ಪ್ರಬಂಧ ಬರೆಯಿರಿ.

೨)ನಿಮ್ಮ ಹೆಸರು ಚಿನ್ಮಯ ಎಂದು ತಿಳಿದು, ನಿಮ್ಮ ಅಣ್ಣನ ಮದುವೆಯ ಸಲುವಾಗಿ ಎರಡು ದಿನ ರಜೆ ಕೋರಿ ವರ್ಗದ ಶಿಕ್ಷಕರಿಗೆ ಪತ್ರ ಬರೆಯಿರಿ.

೩) 'ಕ್ರೀಡೆಯ ಮಹತ್ವ' ಕುರಿತು ಪ್ರಬಂಧ ಬರೆಯಿರಿ.

೪)ನಿಮ್ಮ ಹೆಸರು ರವಿ ಎಂದು ತಿಳಿದು, ಅರ್ಧ ವಾರ್ಷಿಕ ಪರೀಕ್ಷೆ ತಯಾರಿ ಕುರಿತು ಬೆಳಗಾವಿಯಲ್ಲಿರುವ ನಿಮ್ಮ ತಂದೆಗೆ ಪತ್ರ ಬರೆಯಿರಿ.